ಅವರು ಗುಲ್ಬರ್ಗಾ ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಸರ್ವೆ ಮಾಡುವ ಕೆಲಸಕ್ಕೆ ಹೋಗಿದ್ದರು. ಬಹುಶಃ ಆ ವೇಳೆಯಲ್ಲಿ ಮಾನ್ಯ ಸದಸ್ಯರು ಸಂಪರ್ಕಿಸಿದಾಗ ಅವರು ಕಛೇರಿಯಲ್ಲಿ ಇರಲಿಲ್ಲವೆಂದು ಕಾಣುತ್ತದೆ. ಈಗ ಅಲ್ಲಿ ಅಧಿಕಾರಿಗಳು ಇದ್ದಾರೆ.

**ಅಧ್ಯಕ್ಷರು:** ಶಾಸಕರು ತಮ್ಮ ಗಮನಕ್ಕೆ ಈ ವಿಷಯವನ್ನು ತಂದಿದ್ದಾರೆ. ಟೋಕನ್ ಸ್ಟಾಫ್ ಆದರೂ ಅಲ್ಲಿಗೆ ಕಳುಹಿಸಿಕೊಡುವುದಕ್ಕೆ ಏರ್ಪಾಡು ಮಾಡಿ.

**ಶ್ರೀ ಆರ್. ರೋಷನ್ ಬೇಗ್:** ಮಾಡುತ್ತೇನೆ.

**ಶ್ರೀ ಬಸವಂತರೆಡ್ಡಿ ಮೊತಕಪಲ್ಲಿ:** ಎಷ್ಟು ಸಲ ದೂರವಾಣಿ ಮಾಡಿದರೂ ಯಾರೂ ಎತ್ತುವುದಿಲ್ಲ.

**ಶ್ರೀ ಆರ್. ರೋಷನ್ ಬೇಗ್:** ಅವರು ಕಛೇರಿಯಲ್ಲಿ ಇರಬೇಕೆಂದು ನಾನು ಆದೇಶ ಕೊಡುತ್ತೇನೆ.

**ಅಧ್ಯಕ್ಷರು:** ಅವರು ಆದೇಶ ಕೊಡುತ್ತಾರೆ. ಆಯಿತು.

**ಶ್ರೀ ಶಿವಾನಂದ ಎಸ್. ಪಾಟೀಲ್:** ಹೋದಸಲ ಕೂಡ ಈ ಪ್ರಶ್ನೆ ಬಂದಿತ್ತು. ರಾಜ್ಯದಲ್ಲಿರುವ ಸಣ್ಣ ಕೈಗಾರಿಕೆಗಳ ಬಗ್ಗೆ ಎಷ್ಟು ಮುಚ್ಚಿವೆ, ಎಷ್ಟು ಎಕ್ಸಿಸ್ಟೆನ್ಸ್‌ನಲ್ಲಿ ಇವೆ ಎಂಬುದರ ಬಗ್ಗೆ ಮಾಹಿತಿಯನ್ನು ಕೇಳಿದ್ದೆವು. ಅದನ್ನು ಕೊಡುವುದಾಗಿ ತಿಳಿಸಿದ್ದರು.

**ಅಧ್ಯಕ್ಷರು:** ಅದು ಬೇಕಾಗಿಲ್ಲ. ಇದು ಸೇಡಮ್‌ನ ಕಚೇರಿಯಲ್ಲಿ ಯಾರೂ ಇಲ್ಲವೆನ್ನುವ ಬಗ್ಗೆ ಪ್ರಶ್ನೆ ಇರುವುದು. ಇದರ ಬಗ್ಗೆ ಏನಾದರೂ ಇದ್ದರೆ ಕೇಳಿ. ಎಷ್ಟು ಮುಚ್ಚಿದ್ದಾರೆ, ಎಷ್ಟು ತೆಗೆದಿದ್ದಾರೆ ಎನ್ನುವುದರ ಬಗ್ಗೆ ನೀವು ಬೇಕಾದರೆ ಪ್ರತ್ಯೇಕವಾಗಿ ಪ್ರಶ್ನೆಯನ್ನು ಕೇಳಿ.

## ಉತ್ತಮ ಹಾಲು ಹಿಂಡುವ (ರಾಸು) ತಳಿ ಅಭಿವೃದ್ಧಿ ಕುರಿತು

59(657) **ಶ್ರೀ ಬೆಲ್ಲದ ಚಂದ್ರಕಂತ್ ಗುರುಪ್ಪ (ಧಾರವಾಡ) :** ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಉತ್ತರ ಕರ್ನಾಟಕ ಭಾಗದ ಉತ್ತಮ ಹಾಲು ಹಿಂಡುವ (ರಾಸು) ತಳಿ ಅಭಿವೃದ್ಧಿಗಾಗಿ ಪರಿಶೀಲಿಸಲಾಗುತ್ತಿದೆಯೇ.

ಆ. ಪಶುಸಂಗೋಪನಾ ಇಲಾಖೆಯಲ್ಲಿ ಹಸು (ರಾಸುತಳಿ) ಅಭಿವೃದ್ಧಿ ಕುರಿತು ಕೈಗೊಂಡಿರುವ ಕ್ರಮಗಳೇನು:

ಇ. ಮಿಶ್ರ ತಳಿ ಹಾಗೂ ಲಾಭದಾಯಕ ತಳಿಗಳನ್ನು ಗುರುತಿಸಿರುವ ಹಸುಗಳ ಹೆಸರುಗಳೇನು: ಇವು ಯಾವ ಭಾಗದಲ್ಲಿ ಹೆಚ್ಚಾಗಿ ಪ್ರಸ್ತುತವಿವೆ: ಹಾಗೂ ಯಾವ ಪ್ರದೇಶದಲ್ಲಿ ಪಾಲನೆ ಮಾಡಲಾಗುತ್ತಿದೆ.

ಈ. ಹಾಲು ಉತ್ಪಾದನೆ ಸಂಶೋಧನೆಯಲ್ಲಿ ಉತ್ತಮ ಸಾಧನೆ ಮಾಡಲು ಕೈಗೊಂಡ ಇನ್ನಿತರ ಕಾರ್ಯಕ್ರಮಗಳೇನು: (ಪೂರ್ಣವಾದ ಮಾಹಿತಿ ನೀಡುವುದು)

ಉ. ರಾಷ್ಟ್ರದಲ್ಲೇ ಹಾಲಿನ ಉತ್ಪಾದನೆಯಲ್ಲಿ ಕರ್ನಾಟಕ ಮೊದಲ ಸ್ಥಾನ ಪಡೆಯಲು ಯಾವ ಯೋಜನೆಯನ್ನು ಕೈಗೊಳ್ಳಲಾಗಿದೆ:

**ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು)**

ಅ. ಹೌದು

ಆ. ದೇಶೀಯ ತಳಿಗಳಾದ ಅಮೃತ ಮಹಲ್, ಹಳ್ಳಿಕಾರ್, ಖಿಲ್ಲಾರ್ ಮತ್ತು ದೇವಣಿ ತಳಿ ಉತ್ತಮ ಗುಣ ಲಕ್ಷಣಗಳುಳ್ಳ ಹೋರಿಗಳ ಆಯ್ಕೆ.

2. ಈ ಹೋರಿಗಳನ್ನು ವೀರ್ಯ ಸಂಸ್ಕರಣಾ ಕೇಂದ್ರಗಳಲ್ಲಿ ಸಾಕಿ ಅಭಿವೃದ್ಧಿ ಪಡಿಸಲಾಗುತ್ತಿದೆ.

3. ಈ ಹೋರಿಗಳ ವೀರ್ಯದಿಂದ ಘನೀಕೃತ ವೀರ್ಯ ನಳಿಕೆಯನ್ನು ಉತ್ಪಾದಿಸಲಾಗುತ್ತಿದೆ.

4. ರಾಜ್ಯಾದ್ಯಂತ ಕೃತಕ ಗರ್ಭಧಾರಣೆ ಮೂಲಕ ಈ ತಳಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

5. ಈ ತಳಿಗಳ ಶುದ್ಧತೆಯನ್ನು ಪ್ರತ್ಯೇಕವಾಗಿ ಕಾಪಾಡಿ ಅಭಿವೃದ್ಧಿಪಡಿಸಲಾಗುತ್ತಿದೆ.

6. ಈ ತಳಿಗಳ ಶುದ್ಧತೆಯನ್ನು ಹೋರಿಕರುಗಳ ಉತ್ತಮ ಗುಣಮಟ್ಟದ ಮೂಲಕ ಮಾಡಲಾಗುತ್ತಿದೆ.

ಇ. ಜರ್ಸಿ ಹೆಚ್.ಎಫ್. ತಳಿಗಳು ಹಾಲು ಉತ್ಪಾದನೆಗೆ ಹೆಸರುವಾಸಿ ತಳಿಗಳಾಗಿದ್ದು, ಇವುಗಳು ರಾಜ್ಯಾದ್ಯಂತ ಹರಡಿದ್ದರೂ ಹಳೇ ಮೈಸೂರು ಭಾಗದಲ್ಲಿ ಹೆಚ್ಚು ಸಂಖ್ಯೆಯಲ್ಲಿದ್ದು ಈ ಭಾಗದಲ್ಲಿ ರೈತರು ಹೆಚ್ಚು ರಾಸುಗಳನ್ನು ಪಾಲನೆ ಮಾಡುತ್ತಿದ್ದಾರೆ.

1. ಹೆಚ್ಚು ಹಾಲು ಇಳುವರಿ ತಳಿಗಳಾದಂತಹ ಜರ್ಸಿ ಮತ್ತು ಹೆಚ್. ಎಫ್ ಹೋರಿಗಳ ಆಮದು.

2. ಈ ಹೋರಿಗಳ ವೀರ್ಯದಿಂದ ಘನೀಕೃತ ವೀರ್ಯ ನಳಿಕೆಗಳ ಉತ್ಪಾದನೆ.

3. ಘನೀಕೃತ ವೀರ್ಯ ಉತ್ಪಾಧನಾ ಪ್ರಯೋಗ ಶಾಲೆಗಳನ್ನು ಆಧುನಿಕ ಯಂತ್ರೋಪಕರಣಗಳಿಂದ ಸಜ್ಜುಗೊಳಿಸಿ ಬಲವರ್ಧಿಸುವುದು.

4. ಈ ತಳಿಗಳ ಘನೀಕೃತ ವೀರ್ಯ ನಳಿಕೆಗಳ ಮೂಲಕ ಗ್ರಾಮಾಂತರ ಪ್ರದೇಶಗಳ ಕೃತಕ ಗರ್ಭಧಾರಣ ಕೇಂದ್ರಗಳ ಮೂಲಕ ಸಮಗ್ರ ಕೃತಕ ಗರ್ಭಧಾರಣಾ ಕಾರ್ಯವನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಉ. ಲಭ್ಯವಿರುವ ಮಾಹಿತಿಯನ್ವಯ ಸಂಯೋಜಿತ ಮತ್ತು ವ್ಯಾಪಕ ರೀತಿಯಲ್ಲಿ ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿ ರಾಜ್ಯವು ಹಾಲಿನ ಉತ್ಪಾದನೆಯಲ್ಲಿ ಉನ್ನತ ಮಟ್ಟವನ್ನು ಸಾದಿಸಬಹುದಾಗಿದೆ.

ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ: ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಬಹುಶಃ ಇಡೀ ರಾಷ್ಟ್ರದಲ್ಲಿಯೇ ಈ ಹಸುಗಳನ್ನು, ರಾಸುಗಳನ್ನು ಪಾಲನೆ ಮಾಡುವುದಕ್ಕೆ ಅಭಿವೃದ್ಧಿ ಮಾಡುವುದಕ್ಕೆ ಬಹಳ ಉತ್ತಮವಾದಂಥ ಹವಾಮಾನವನ್ನು ಹೊಂದಿರುವಂಥ ರಾಜ್ಯ ಕರ್ನಾಟಕ ಬಹುಶಃ ಮೂರು ಪ್ರಕಾರದ ಹವಾಮಾನಗಳನ್ನು ಹೊಂದಿರುವುದರಿಂದ ಈ ರಾಜ್ಯದಲ್ಲಿ ಇದರ ಅಭಿವೃದ್ಧಿ ಹೆಚ್ಚಾದರೆ ರೈತರ ಆರ್ಥಿಕ ಅಭಿವೃದ್ಧಿಗೆ ಹೆಚ್ಚು ಸಹಾಯವಾಗುತ್ತದೆ ಮತ್ತು ರೈತ ಕುಟುಂಬದ ಮಕ್ಕಳಿಗೆ, ಯುವಕರಿಗೆ ಸ್ವಾಭಿಮಾನದಿಂದ ಸ್ವಾವಲಂಭಿಯಾಗಿ ಬದುಕುವುದಕ್ಕೆ ಅನುಕೂಲವಾಗುತ್ತದೆ. ಅಂತಹ ರಾಸುಗಳನ್ನು ಯಾವ್ಯಾವುದು ಇಲ್ಲಿ ಅಭಿವೃದ್ಧಿ ಪಡಿಸುತ್ತಿದ್ದೀರಿ? ಯಾವ್ಯಾವ ಪ್ರದೇಶಗಳಲ್ಲಿ ಅವುಗಳನ್ನು ಅಭಿವೃದ್ಧಿ ಪಡಿಸಿದರೆ ಲಾಭದಾಯಕವಾಗುತ್ತದೆ ಎನ್ನುವ ಪ್ರಶ್ನೆಯನ್ನು ನಾನು ಕೇಳಿದ್ದೇನೆ. ಆದರೆ ನನಗೆ ಸರಿಯಾದ ಉತ್ತರ ಸಿಕ್ಕಿಲ್ಲ. ಬಹುಶಃ ಈಗ ನೋಡಿ ದನಕರುಗಳು ಏನಿವೆ, ಅವು ಹೆಚ್ಚು ಲಾಭದಾಯಕವಾಗಿ ಉತ್ಪಾದನೆಗೆ ಅನುಕೂಲವಾಗುವಂಥ ದೃಷ್ಟಿಯಲ್ಲಿ ಇಲ್ಲ ಹಸುಗಳನ್ನು ಇವತ್ತು ನಮ್ಮ ರೈತರು ಅಥವಾ ರೈತ ಕುಟುಂಬಗಳು ಪಾಲನೆ ಮಾಡುತ್ತಿಲ್ಲ. ಆದ್ದರಿಂದ ಅವರಿಗೆ

ಹೆಚ್ಚು ಲಾಭ ಇಲ್ಲ. ಅದರಿಂದ ಬರೇ ಗೊಬ್ಬರದ ಲಾಭವಾಗಿದೆಯೇ ಹೊರತಾಗಿ ಹೆಚ್ಚಿನ ಆರ್ಥಿಕ ಲಾಭ ಆಗಲಿಕ್ಕೆ ಹೆಚ್ಚು ಉತ್ತಮವಾದಂಥ ತಳಿಗಳನ್ನು ಯಾವ್ಯಾವ ಪ್ರದೇಶಗಳಲ್ಲಿ ಬೆಳೆಸಬಹುದು ಎಂಬುದಕ್ಕೆ ಮಾಹಿತಿ ಬೇಕು. ಹಾಲು ಉತ್ಪಾದನೆಗೆ ಹೆಚ್ಚು ಅನುಕೂಲವಾದಂಥ ತಳಿಗಳು ಯಾವುದು? ಕರ್ನಾಟಕದಲ್ಲಿ ಇಷ್ಟೊಂದು ಉತ್ತಮವಾದ ಹವಾಮಾನ ಇರುವಾಗ ಬೇರೆ ರಾಜ್ಯಗಳಿಂದ ಹಾಲು ಬರುತ್ತಿದೆ. ನಮ್ಮಲ್ಲಿ ಎಷ್ಟು ಬೇಡಿಕೆ ಇದೆಯೋ ಅದಕ್ಕೆ ತಕ್ಕಂತೆ ಹಾಲು ನಮ್ಮಲ್ಲಿ ಉತ್ಪಾದನೆ ಆಗುತ್ತಿಲ್ಲ ಎಂಬುದು ಇದರಿಂದ ಕಂಡುಬರುತ್ತದೆ. ಆ ದೃಷ್ಟಿಯಿಂದ ಉತ್ತಮವಾದಂಥ ಹಸುಗಳನ್ನು ಯಾವ್ಯಾವ ಪ್ರದೇಶಗಳಲ್ಲಿ ಹೆಚ್ಚು ಪಾಲನೆ ಮಾಡಿದರೆ ಅದು ಹೆಚ್ಚು ಲಾಭದಾಯಕವಾಗುತ್ತದೆ ಮತ್ತು ಇದರಿಂದ ರೈತರಿಗೆ ಸಹಾಯಕವಾಗುತ್ತದೆ ಎಂಬುದನ್ನು ತಿಳಿಸಬೇಕೆಂದು ಮಾನ್ಯ ಮಂತ್ರಿಗಳನ್ನು ಕೋರುತ್ತೇನೆ.

ಶ್ರೀ ಎಂ. ಮಹದೇವ್: ಸನ್ಮಾನ್ಯ ಅಧ್ಯಕ್ಷರೇ, ಬಡವರ ಬಂಧು ಆಗಿರತಕ್ಕಂಥ ಪಶುಸಂಗೋಪನಾ ಇಲಾಖೆಯಲ್ಲಿ ಪಶು ಸಾಕಣೆಕೆಗೆ ಹೆಚ್ಚು ಮಹತ್ವವನ್ನು ಕೊಡುತ್ತಿದ್ದೇವೆ. ಅಧಿಕ ಹಾಲು ಉತ್ಪಾದನೆ ಮಾಡತಕ್ಕಂಥ ಮಿಶ್ರ ತಳಿ ಹಸುಗಳಿಗೇ ರಾಜ್ಯದಲ್ಲಿ ಹೆಚ್ಚಿನ ಒತ್ತನ್ನು ಕೊಡುತ್ತಿದ್ದೇವೆ. ಸ್ಥಳೀಯ ತಳಿಗಳಿಂದ ನಾವು ನಿರೀಕ್ಷೆ ಮಾಡಿದಷ್ಟು ಹಾಲು ಸಿಗುತ್ತಿಲ್ಲ. ಯಾವ್ಯಾವ ತಳಿಗಳನ್ನು ರಾಜ್ಯದಲ್ಲಿ ಅಭಿವೃದ್ಧಿ ಮಾಡುತ್ತಿದ್ದೇವೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಅಧಿಕ ಇಳುವರಿ ಇರುವ ತಳಿಗಳು ಎಂದರೆ ಜರ್ಸಿ ಮತ್ತು ಹೆಚ್. ಎಫ್ ಹೋರಿಗಳನ್ನು ಆಮದು ಮಾಡಿಕೊಂಡು ಅವುಗಳಿಂದ ಫನೀಕೃತ ವೀರ್ಯ ನಳಿಕೆಗಳ ಮೂಲಕ ಉತ್ಪಾದಿಸಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಕೃತಕ ಗರ್ಭಧಾರಣೆ ಮೂಲಕ ಹೆಚ್ಚು ಹಾಲು ನೀಡಬಲ್ಲಂಥ ಹಲವಾರು ಮಿಶ್ರತಳಿ ರಾಸುಗಳನ್ನು ಅಭಿವೃದ್ಧಿಪಡಿಸುತ್ತಿದ್ದೇವೆ. ಇದರ ಜೊತೆಗೆ ಈ ಫನೀಕೃತ ವೀರ್ಯ ಉತ್ಪನ್ನ ಪ್ರಯೋಗಾಲಯಗಳನ್ನು ಆಧುನಿಕ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳೊಡನೆ ಸಜ್ಜುಗೊಳಿಸಲಾಗಿದೆ. ನಮ್ಮ ದೇಶದಲ್ಲಿ ಕರ್ನಾಟಕ ಎಷ್ಟನೇ ಸ್ಥಾನದಲ್ಲಿದೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಕರ್ನಾಟಕ ರಾಜ್ಯ ಹಾಲು ಉತ್ಪಾದನೆಯಲ್ಲಿ ರಾಷ್ಟ್ರದಲ್ಲಿ ಪ್ರಸ್ತುತ ಹತ್ತನೇ ಸ್ಥಾನದಲ್ಲಿದೆ. ಇದನ್ನು ಮೊದಲನೇ ಸ್ಥಾನಕ್ಕೆ ಏರಿಸಲು ಮೇಲಿನ ಕಾರ್ಯಚಟುವಟಿಕೆಗಳನ್ನು ತೀವ್ರಗೊಳಿಸಲಾಗಿದೆ. ಮತ್ತು ವ್ಯಾಪಕ ರೀತಿಯಲ್ಲಿ ಮೇಲಿನ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸುತ್ತಿದ್ದೇವೆ. ಈಗ ಕರ್ನಾಟಕ ರಾಜ್ಯದಲ್ಲಿ ಸುಮಾರು ಒಟ್ಟು ಒಂದುಕೋಟಿ ಇಪ್ಪತ್ತೈದು ಸಾವಿರ ಲೀಟರ್ ನಷ್ಟು ಹಾಲು ಉತ್ಪಾದನೆಯಾಗುತ್ತಿದೆ. ಈಗ ಇಡೀ ರಾಜ್ಯದಲ್ಲಿ ಹೋಲಿಸಿಕೊಂಡರೆ ನಮ್ಮದೇ ಹೆಚ್ಚಿಗೆ ಬರುತ್ತಿದೆ. ಇದನ್ನು ಇನ್ನೂ ಜಾಸ್ತಿ ಮಾಡಬೇಕೆಂದರೆ ಈ ರೀತಿ ಮಿಶ್ರ ತಳಿಗಳನ್ನು ಯಾವ್ಯಾವ ಕಡೆ ಕೊಡಬೇಕಾಗಿದೆ ಎಂದು ನಾವು ಅಲ್ಲಲ್ಲಿ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದೇವೆ. ಅಲ್ಲಿ ಈ ಮಿಶ್ರತಳಿ ಹಸುಗಳ ಅಭಿವೃದ್ಧಿಗೆ ಫನೀಕೃತ ವೀರ್ಯವನ್ನು ಅಲ್ಲಿ ಕೊಡುವ ವ್ಯವಸ್ಥೆಯನ್ನು ಮಾಡುತ್ತಿದ್ದೇವೆ. ಇದಕ್ಕೆ ಬಹಳ ಉತ್ತಮ ಪ್ರತಿಕ್ರಿಯೆ ನಮ್ಮ ರೈತರಿಂದ ಬಂದಿದೆ. ಅದನ್ನು ಇನ್ನೂ ಜಾಸ್ತಿ ಮಾಡುತ್ತಿದ್ದೇವೆ. ಆದ್ದರಿಂದ ಈ ಹಾಲು ಉತ್ಪಾದನೆ ವಿಚಾರದಲ್ಲಿ ಪಶುಸಂಗೋಪನೆ ಇಲಾಖೆ ಎಲ್ಲಾ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಂಡಿದೆ. ತಮಗೆ ಇನ್ನೂ ಏನಾದರೂ ಹೆಚ್ಚು ಮಾಹಿತಿ ಬೇಕೆಂದರೆ ಕೊಡುವುದಕ್ಕೆ ನಾನು ತಯಾರಾಗಿದ್ದೇನೆ.

**ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ:** ನನಗೆ ಬೇಕಾಗಿರುವ ಮಾಹಿತಿ ಏನೆಂದರೆ ಈಗ ಬೆಂಗಳೂರುನಗರಕ್ಕೆ ಸುತ್ತಮುತ್ತ ಇರುವಂಥ ರಾಜ್ಯಗಳಿಂದ ಪ್ರತಿನಿತ್ಯ ಹಾಲು ಬರುತ್ತಿದೆ. ಅದೇಪ್ರಕಾರ ಉತ್ತರ ಕರ್ನಾಟಕದಲ್ಲಿ ಮಹಾರಾಷ್ಟ್ರದಿಂದ ಸಹಿತ ಹಾಲು ಬರುತ್ತಿದೆ. ಇದು ಎಷ್ಟು ಪ್ರಮಾಣದಲ್ಲಿ ಹಾಲು ಬರುತ್ತಿದೆ ಎಂದು ಸರ್ಕಾರದಲ್ಲಿ ಏನಾದರೂ ಅಂದಾಜು ಲೆಕ್ಕ ಇದೆಯಾ? ನಮ್ಮ ರಾಜ್ಯದಿಂದ ಕೂಡ ಹೊರಗೆ ಏನಾದರೂ ಹಾಲು ಹೋಗುತ್ತಿದೆಯಾ? ಇದು ಬಹಳ ಮುಖ್ಯ. ಅಮೃತಮಹಲ್, ಹಳ್ಳಿಕಾರ್ ಮತ್ತು ದೇವಣಿ ಈ ಮೂರು ತಳಿಗಳು ಏನಿವೆ ಇವುಗಳಿಂದ ಉತ್ತಮವಾದಂಥ ರಾಸುಗಳನ್ನು ನಮ್ಮಲ್ಲಿ ಅಭಿವೃದ್ಧಿ ಮಾಡಬಹುದು. ಇವುಗಳನ್ನು ಯಾವ್ಯಾವ ಪ್ರದೇಶದಲ್ಲಿ ಅಭಿವೃದ್ಧಿ ಮಾಡಬಹುದು ಎಂಬುದನ್ನು ತಿಳಿಸಬೇಕು. ಏಕೆಂದರೆ ಒಳ್ಳೆಯ ಹವಾಮಾನ ಇದೆ, ಹೆಚ್ಚು ಅನುಕೂಲತೆ ಇದೆ ಮತ್ತು ಇದರಿಂದ ರೈತರಿಗೆ ಇನ್ನೂ ಹೆಚ್ಚು ಆರ್ಥಿಕವಾಗಿ ಸಹಾಯವಾಗುತ್ತದೆ. ಇದರ ಬಗ್ಗೆ ನಮಗೆ ಸರಿಯಾದ ಮಾಹಿತಿಯನ್ನು ಕೊಡಬೇಕಾಗುತ್ತದೆ. ಇದರ ಮೇಲೆ ಅವಲಂಬನವಾದಂಥ ಯುವಕರಿಗೆ ಇನ್ನೂ ಹೆಚ್ಚು ಉದ್ಯೋಗ ಸೃಷ್ಟಿ ಮಾಡುವಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಇದಕ್ಕೆ ಹೆಚ್ಚು ಒತ್ತು ಕೊಡಬೇಕಾಗಿದೆ. ಈ ದೃಷ್ಟಿಯಿಂದ ನಾನು ನಿಮ್ಮನ್ನು ಕೇಳುತ್ತಿದ್ದೇನೆ. ಯಾವ್ಯಾವ ಪ್ರದೇಶಗಳಲ್ಲಿ ಯಾವ್ಯಾವ ರಾಸುಗಳನ್ನು ಇನ್ನೂ ಹೆಚ್ಚು ಅಭಿವೃದ್ಧಿ ಮಾಡುವುದಕ್ಕೆ ಅವಕಾಶ ಇದೆ. ಈ ಪ್ರಮಾಣದಲ್ಲಿ ನೀವು ಮಾಡುತ್ತಿದ್ದೀರಾ ಹೇಗೆ? ಹಾಲು ಉತ್ಪಾದನೆ ಎಷ್ಟು ಪ್ರಮಾಣದಲ್ಲಿ ಹೆಚ್ಚಾಗಿದೆ ಅಥವಾ ಬೇರೆ ರಾಜ್ಯಗಳಿಂದ ಯಾವ ಪ್ರಮಾಣದಲ್ಲಿ ಬರುತ್ತಿದೆ ಎನ್ನುವುದರ ಬಗ್ಗೆ ಸರಿಯಾದಂಥ ಉತ್ತರ ಬೇಕು.

11.40 ಎ.ಎಂ.

ಇವು ಇಷ್ಟು ತಳಿಗಳು ಎಷ್ಟು ಪ್ರಮಾಣದಲ್ಲಿವೆ? ಯಾವ ಯಾವ ಜಿಲ್ಲೆಯಲ್ಲಿವೆ? ಇದು ಮಾಹಿತಿ ಬೇಕಲ್ಲಾ.

**ಶ್ರೀ ಎಂ. ಮಹದೇವ್:** ಮಾನ್ಯ ಅಧ್ಯಕ್ಷರೇ, ಸ್ಥಳೀಯ ತಳಿಗಳನ್ನು ಅಭಿವೃದ್ಧಿ ಪಡಿಸುವುದನ್ನು ನಾವು ಕೈ ಬಿಟ್ಟಿಲ್ಲ. ಮಿಶ್ರ ತಳಿಗಳ ಅಭಿವೃದ್ಧಿ ಪಡಿಸುವುದನ್ನೂ ಸಹ ನಾವು ಕೈ ಬಿಟ್ಟಿಲ್ಲ. ಅದನ್ನು ಉತ್ತಮವಾದ ರೀತಿಯಲ್ಲಿ ನಾವು ಕರ್ನಾಟಕ ರಾಜ್ಯದಲ್ಲಿ ಮಾಡುತ್ತಿದ್ದೇವೆ. ರಾಜ್ಯದಲ್ಲಿ ದೇಶಿಯ ತಳಿಗಳಾದಂತಹ ಅಮೃತ ಮಹಲ್, ಹಳ್ಳಿಕಾರ್ ಖಿಲ್ಲಾರ್ ಮತ್ತು ದೇವಣಿ ತಳಿಗಳ ಶುದ್ದತೆಯನ್ನು ಕಾಪಾಡುವ ದೃಷ್ಟಿಯಿಂದ ಸದರಿ ತಳಿಗಳನ್ನು ಪ್ರತ್ಯೇಕವಾಗಿ ಮತ್ತು ಕ್ರಮವಾಗಿ ಅಜ್ಜಂಪುರ, ಕುಣಿಕೇನಹಳ್ಳಿ, ಮತ್ತು ಬಂಕಾಪುರ ಕ್ಷೇತ್ರಗಳಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಅದು ತಮಗೂ ಗೊತ್ತಿದೆ. ದೇವಣಿಯ ಉತ್ತಮ ತಳಿಗಳ ಹೋರಿಗಳನ್ನು ಆಯ್ಕೆ ಮಾಡಿ ವೀರ್ಯ ಸಂಸ್ಕರಣಾ ಕೇಂದ್ರಗಳಲ್ಲಿ ಸಾಕಿ ಇವುಗಳಿಂದ ಘನೀಕೃತ ವೀರ್ಯ ಶೇಖರಣಾ ನಳಿಕೆಗಳನ್ನು ಉತ್ಪಾದಿಸಿ ರಾಜ್ಯಾದ್ಯಂತ ಆಯಾಯಾ ಸ್ಥಳೀಯ ಪ್ರದೇಶಗಳಲ್ಲಿ ಕೃತಕ ಗರ್ಭಧಾರಣೆಯನ್ನೂ ಸಹ ಮಾಡುತ್ತಿದ್ದೇವೆ. ಈಗ ಹಾಲಿನ ಬಗ್ಗೆ ತಾವು ಹೇಳಿದಿರಿ ಅದಕ್ಕೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಆ ಮಾಹಿತಿಯನ್ನು ಕೊಡಲಿಕ್ಕೆ ತಯಾರಾಗಿದ್ದೇನೆ. ನಾವು ಹೊರರಾಜ್ಯಗಳಿಂದ ಬರತಕ್ಕಂಥ ಹಾಲನ್ನು ಕಂಟ್ರೋಲ್ ಮಾಡುವುದಕ್ಕೆ ಆಗುವುದಿಲ್ಲ. ಕೇಂದ್ರ

ಸರ್ಕಾರದ ನಿಯಮಾನುಸಾರ ಹೊರರಾಜ್ಯಗಳಿಂದ ಬರತಕ್ಕಂಥ ಹಾಲನ್ನು ತಡೆಯಲು ಆಗುವುದಿಲ್ಲ. ಏಕೆಂದರೆ ಅವರು ಡೀ ಕಂಟ್ರೋಲ್ ಮಾಡಿರುವುದರಿಂದ ಹಾಲನ್ನು ನಮ್ಮ ರಾಜ್ಯಕ್ಕೆ ಸರಬರಾಜು ಮಾಡುವುದನ್ನು ತಡೆಯಲು ಸಾಧ್ಯವಾಗುವುದಿಲ್ಲ. ಈಗ ನಮ್ಮ ರಾಜ್ಯದಲ್ಲಿ ನಾವು ಹಾಲನ್ನು ಜಾಸ್ತಿ ಉತ್ಪಾದನೆ ಮಾಡುತ್ತಿದ್ದೇವೆ. ಹೊರಗಡೆಯಿಂದ ನೀವು ಹಾಲನ್ನು ನಮ್ಮ ರಾಜ್ಯಕ್ಕೆ ತರುವುದಕ್ಕೆ ಆಗುವುದಿಲ್ಲ ಅಥವಾ ನಿಷೇಧ ಮಾಡುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ಆ ರೀತಿ ಮಾಡಿದರೆ ಕಾನೂನಿಗೆ ವಿರುದ್ಧವಾಗಿ ಮಾಡಿದಂತೆ ಆಗುತ್ತದೆ. ಆದ್ದರಿಂದ ನಮ್ಮ ರಾಜ್ಯದಲ್ಲಿ ಹಾಲು ಉತ್ಪನ್ನವನ್ನು ಜಾಸ್ತಿ ಮಾಡಿ, ಈಗ ನಾವು ನಮ್ಮ ಹಾಲನ್ನು ಉತ್ತರ ಪ್ರದೇಶಕ್ಕೆ ಕಳುಹಿಸುವಂತಹ ಸ್ಥಿತಿಯನ್ನು ನಾವು ತಲುಪಿದ್ದೇವೆ. ಇಷ್ಟು ಬಿಟ್ಟರೆ ನಾವು ಹಾಲಿನ ಬಗ್ಗೆ ಹೆಚ್ಚು ಹೇಳುವುದಕ್ಕೆ ಆಗುವುದಿಲ್ಲ. ತಾವು ಹಾಲಿನ ಬಗ್ಗೆ ಇನ್ನೂ ಹೆಚ್ಚಿನ ಮಾಹಿತಿ ಬೇಕು ಎಂದು ಬಯಸಿದರೆ ಸಪರೇಟ್ ಪ್ರಶ್ನೆ ಕೇಳಿದರೆ ಉತ್ತರ ಒದಗಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ: ಮಾನ್ಯ ಅಧ್ಯಕ್ಷರೇ, ಈಗ ರೆಗ್ಯುಲರ್ ಪಶುಸಂಗೋಪನಾ ಇಲಾಖೆಗಳ ಮತ್ತು ಕೆ.ಎಂ.ಎಫ್, ನಮ್ಮ ಮಿಲ್ಕ್ ಸೊಸೈಟಿಗಳಿಗೆ ಡೈರಿಗಳಿಂದ ಈ ವೀರ್ಯವನ್ನು ತಂದು ಸಪ್ಲೈ ಮಾಡುತ್ತಿರುವುದಕ್ಕೂ ಕೋ ಆರ್ಡಿನೇಶ್‌ನ್ ಇಲ್ಲ. ಈಗ ಕೃತಕ ಗರ್ಭಧಾರಣೆಯ ಸಲಕರಣೆಗಳನ್ನು ಕೊಡುತ್ತಾ ಇರತಕ್ಕಂಥದ್ದರಲ್ಲಿ ನಿಮ್ಮ ಇಲಾಖೆ ಮತ್ತು ಮಿಲ್ಕ್ ಡೈರಿಗಳು ಇದರಲ್ಲಿ ಒಂದು ಕೋ -ಆಡೀನೇಶನ್ ಇಲ್ಲ ಅದು ಒಂದು ಕಡೆಯಿಂದ ಕೊಡುವುದು ಅವರೂ ಕೂಡ ಅದನ್ನು ಪ್ರಗತಿ ವರದಿಯಲ್ಲಿ ಸೇರಿಸುವುದು, ನಿಮ್ಮವರು ಕೊಡುವುದನ್ನು ಸಹ ಸೇರಿಸಿ ಪ್ರಗತಿ ವರದಿಯಲ್ಲಿ ಕೊಡುವುದು, ಈ ಕೆಲಸ ನಡೆಯುತ್ತಿದೆ. ನೀವು ಈ ಎರಡೂ ಜನರನ್ನು ಕೂರಿಸಿ ಒಟ್ಟಾಗಿ ಸೇರಿಸಿ ಮಾಡಿದರೆ ಗ್ರಾಮಾಂತರ ಪ್ರದೇಶದಲ್ಲಿ ಇದು ಲಾಭದಾಯಕವಾಗುತ್ತದೆ ಮತ್ತು ನಿಮ್ಮ ಇಲಾಖೆಗೆ ಸ್ವಲ್ಪ ಸೇವಿಂಗ್ಸ್ ಆಗುತ್ತದೆ ಮತ್ತು ಇದನ್ನು ಬೇರೆ ಬೇರೆ ಕಡೆ ಮಾಡಲಿಕ್ಕೆ ಸಾಧ್ಯವಾಗುತ್ತದೆ. ನನಗೆ ಗೊತ್ತಿದ್ದ ಹಾಗೆ. ಎಲ್ಲಕ್ಕಿಂತ ಹೆಚ್ಚಾಗಿ ನಿಮ್ಮ ಕೃತಕ ಗರ್ಭಧಾರಣೆಯ ವೀರ್ಯ ನಳಿಕೆಗಳು ಇವೆಯಲ್ಲಾ ಇದು ಸಕ್ಸ್‌ಸ್‌ಫುಲ್ ಕಡಿಮೆಯಾಗುತ್ತದೆ. ಕನ್‌ಸೀವ್ ಆಗುವಂತಹ ಪರ್ಸೆಂಟೇಜ್ ಬಹಳ ಕಡಿಮೆ ಇದೆ. ನಿಮ್ಮ ಇಲಾಖೆಯವರು ಯಾವುದೋ ವಯಸ್ಸಾಗಿರತಕ್ಕಂಥ ಹೋರಿಗಳಿಂದ ವೀರ್ಯವನ್ನು ಕಲೆಕ್ಟ್ ಮಾಡಿ ಸರಬರಾಜು ಮಾಡುತ್ತಿದ್ದೀರಿ ದಯವಿಟ್ಟು ಅದನ್ನು ತತ್‌ಕ್ಷಣ ರಿಮೂವ್ ಮಾಡದೇ ಹೋದರೆ ನಮಗೆ ನಷ್ಟವಾಗುತ್ತಿದೆ. ಕನ್‌ಸೀವ್ ಆಗುವಂತಹ ಪರ್ಸೆಂಟೇಜ್ ನಿಮ್ಮ ರೆಗ್ಯುಲರ್ ಇಲಾಖೆ ಸರಬರಾಜು ಮಾಡುತ್ತಾ ಇರತಕ್ಕಂಥ ವೀರ್ಯದಲ್ಲಿ ಬಹಳ ಕಡಿಮೆ ಇದೆ. ಅದನ್ನು ಏನಾದರೂ ಸರಿ ಮಾಡಲಿಕ್ಕೆ ನೀವು ಪ್ರಯತ್ನ ಮಾಡುತ್ತೀರಾ?

ಶ್ರೀ ಎಂ. ಮಹದೇವ್: ನಾವು ವಯಸ್ಸಾದಂತಹ ಹೋರಿಗಳಿಂದ ಕಲೆಕ್ಟ್ ಮಾಡುತ್ತಿಲ್ಲ. ತಾವು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದೀರಿ. ಆ ಸಲಹೆಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್: ಮಾನ್ಯ ಅಧ್ಯಕ್ಷರೇ, ನನ್ನ ಬಹಳ ಮುಖ್ಯವಾದಂತಹ ಪ್ರಶ್ನೆ ಎನಿದೆ ರಾಷ್ಟ್ರದಲ್ಲಿಯೇ ಹಾಲಿನ ಉತ್ಪಾದನೆಯಲ್ಲಿ ಕರ್ನಾಟಕ ಮೊದಲನೇ ಸ್ಥಾನ ಪಡೆಯಲು ಯಾವ ಯೋಜನೆಯನ್ನು ಸರ್ಕಾರ ಕೈಗೊಂಡಿದೆ ಎಂಬುದು? ಅದು ನನ್ನ (ಉ) ಪ್ರಶ್ನೆ. ಅದನ್ನು ನಾನು ಏಕೆ ಕೇಳುತ್ತಿದ್ದೇನೆಂದರೆ ಹಾಲಿನ ಉತ್ಪಾದನೆ ಹೆಚ್ಚು ಮಾಡುವಲ್ಲಿ ಯಾವ ಯಾವ ರಾಸುಗಳನ್ನು ಯಾವ ಯಾವ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಅಭಿವೃದ್ಧಿ ಮಾಡಿ ಇವತ್ತು ಬೆಳೆವಣಿಗೆ ಮಾಡುತ್ತಿದ್ದೀರಿ?

ಶ್ರೀ ಎಂ. ಮಹದೇವ್: ಮಾನ್ಯ ಅಧ್ಯಕ್ಷರೇ, ನಾನು ವಿವರವಾಗಿ ತಮಗೆ ಹೇಳಿದ್ದೇನೆ. ಈಗ ಹೆಚ್ ಎಫ್ ಮತ್ತು ಜರ್ಸಿ ಇವುಗಳನ್ನು ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಅಲ್ಲಿನ ಹವಾಗುಣಕ್ಕೆ ಅನುಗುಣವಾಗಿ ನಾವು ಅಭಿವೃದ್ಧಿ ಪಡಿಸುವುದಕ್ಕೆ ಮಾಡುತ್ತಿದ್ದೇವೆ. ನಾನು ಈಗಾಗಲೇ ವಿವರವಾದ ಉತ್ತರ ಕೊಟ್ಟಿದ್ದೇನೆ. ಸ್ಥಳೀಯ ತಳಿಗಳನ್ನು ಅಭಿವೃದ್ಧಿ ಮಾಡಬೇಕೆಂದು ಮಾಡಿದ್ದೇವೆ. ಈಗ ಇರುವ ಹಾಲು ಅಧಿಕವಾಗಿದೆ. ಇನ್ನೂ ಅಧಿಕವಾದ ಹಾಲು ಉತ್ಪನ್ನ ಮಾಡಲಿಕ್ಕೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್: ಮಾನ್ಯ ಅಧ್ಯಕ್ಷರೇ, ದೇವಣಿ ಎನ್ನುವಂತಹ ತಳಿ ಏನು ಇದೆ ಅದು ಬಹಳ ಉತ್ತಮವಾದಂತಹ ಒಂದು ಮಿಶ್ರ ತಳಿ ಅದು ಹೆಚ್ಚು ಹಾಲು ಕೊಡುತ್ತದೆ. ಒಳ್ಳೆಯ ಫ್ಯಾಟ್ ಇರುವಂತಹ ಹಾಲು ಕೊಡುತ್ತದೆ. ಇದು ಜನರಿಗೆ ಹೆಚ್ಚು ಲಾಭದಾಯಕವಾಗಿದೆ. ಇದು ಜನರಿಗೆ ಸಿಗುವ ಹಾಗೆ ಯಾವ ಯಾವ ಸ್ಥಳಗಳಲ್ಲಿ ಬೆಳವಣಿಗೆ ಮಾಡುತ್ತಿದ್ದಾರೆ ಎಲ್ಲಿ ದೊರೆಯುತ್ತಿದೆ ಎಂಬ ಮಾಹಿತಿ ಬೇಕು .

ಶ್ರೀ ಎಂ. ಮಹದೇವ್: ಮಾನ್ಯ ಅಧ್ಯಕ್ಷರೇ, ಈಗತಾನೇ ಹೇಳಿದೆ. ದೇವಣಿ ಹಸುಗಳ ಅಭಿವೃದ್ಧಿಯನ್ನು ಮಾಡುತ್ತಿದ್ದೇವೆಂದು ಹೇಳಿಕೆ. ಯಾವ ಯಾವ ಕಡೆ ಇದೆ ಎನ್ನುವ ಜಾಗಗಳನ್ನು ಬೇಕಾದರೂ ನಾನು ಹೇಳುತ್ತೇನೆ. ನಿಮ್ಮ ಕಡೆಯಲ್ಲಿಯೇ ಬಂದಿದ್ದೇವೆ. ಅದನ್ನು ಅಭಿವೃದ್ಧಿ ಮಾಡಲಿಕ್ಕೆ ನಾವು ಎಲ್ಲಾ ಕ್ರಮಗಳನ್ನು ಸಹ ತೆಗೆದುಕೊಳ್ಳುತ್ತಿದ್ದೇವೆ. ಈಗ ಅಮೃತ ಮಹಲ್, ಹಳ್ಳಿಕಾರ್, ದೇವಣಿ, ಈ ಮಿಶ್ರ ತಳಿಗಳ ಅಭಿವೃದ್ಧಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತಿದ್ದೇವೆ.

ಶ್ರೀ ಜಿ. ಚಂದ್ರಕಾಂತ್ ಬೆಲ್ಲದ್: ಮಾಹಿತಿ ಕೊಡಿ.

## ಸಕ್ಕರೆ ಕಾರ್ಖಾನೆಗಳು ಕಬ್ಬಿನ ಬಿಲ್ಲನ್ನು ರೈತರಿಗೆ ಪಾವತಿ ಮಾಡದೇ ಇರುವ ಬಗ್ಗೆ

62 (367) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) : ಮಾನ್ಯ ಪಶು ಸಂಗೋಪನೆ ಹಾಗೂ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ರಾಜ್ಯದಲ್ಲಿರುವ ಸಕ್ಕರೆ ಕಾರ್ಖಾನೆಗಳು ಸಕಾಲದಲ್ಲಿ ಕಬ್ಬಿನ ಬಿಲ್ಲನ್ನು ರೈತರಿಗೆ ಪಾವತಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?